**ಸಾಕ್ಷಿಯನ್ನು ದಿಃ 02.07.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

ಅಪಘಾತವಾದಾಗ ನಮ್ಮ ಯಜಮಾನರನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಸೇರಿಸಿದ್ದೇವು. ಅಲ್ಲಿ ಅಪಘಾತ ಹೇಗೆ ಆಯಿತು ಎಂದು ಹೇಳಿದ್ದೇವೆ. ಅಲ್ಲಿಂದ ಮೈಸೂರು ಐಶ್ವಯರ್ ಆಸ್ಪತ್ರೆಗೆ ಸೇರಿಸಿದ್ದೇವು. ನನ್ನ ಯಜಮಾನರಿಗೆ ಎಡಭಾಗದ ಭುಜದ ಮೂಳೆ ಮುರಿದಿತ್ತು. ಆಗ ಶಸ್ತ್ರ ಚಿಕಿತ್ಸೆ ಮಾಡಿ ಪ್ಲೇಟ್ ಹಾಕಿದ್ದರು. ಮೂರು ದಿನದ ನಂತರ ಬಿಡುಗಡೆಗೊಂಡಿದ್ದಾರೆ. 15 ದಿನಕ್ಕೊಮ್ಮೆ follow up ಗೆ ಬರುತ್ತಿದ್ದರು. ಆ ನಂತರ ಅವರು ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಯಜಮಾನರು follow up ಗೆ ಬರುತ್ತಿದ್ದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ದಿನಾಂಕ 17.03.2026 ರಂದು ನ್ಯಾಯಾಲಯಕ್ಕೆ ಹಾಜರಾಗಿದ್ದರು. ಬಿಪಿ ಏರುಪೇರಾಗಿ ಆಸ್ಪತ್ರೆಗೆ ದಾಖಲಾಗಿದ್ದು ದಿನಾಂಕ 23.03.2026 ರಂದು ತೀರಿಕೊಂಡಿದ್ದಾರೆ. ಆಗ ಅವರಿಗೆ 64 ವರ್ಷ ವಯಸ್ಸಾಗಿತ್ತು. ನನ್ನ ಯಜಮಾನರು ಚಲಾಯಿಸುತ್ತಿದ್ದ ಬೈಕ್ ನಮ್ಮ ಸಂಬಂಧಿಕರಿಗೆ ಸೇರಿದೆ. ನನ್ನ ಯಜಮಾನರಲ್ಲಿ ಡಿ.ಎಲ್ ಇತ್ತು. ಅವರು ಚಲಾಯಿಸುತ್ತಿದ್ದ ಬೈಕ್ ಗೆ ಆರ್.ಸಿ. ವಿಮೆ ಇತ್ತು. ಅಪಘಾತ ನನ್ನ ಯಜಮಾನರ ತಪ್ಪಿನಿಂದ ಆಗಿದ್ದರೂ ಪರಿಹಾರಕ್ಕಾಗಿ ಸುಳ್ಳು ದೂರು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ಅಪಘಾತದ ನಂತರ ನನ್ನ ಯಜಮಾನರು ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಯಜಮಾನರು ಅಪಘಾತದಿಂದ ಆದ ಗಾಯಗಳಿಂದ ಸಂಪೂರ್ಣ ಗುಣಮುಖರಾಗಿದ್ದರು ಎಂದರೆ ಸರಿಯಲ್ಲ. ಅವರಿಗೆ ಆದ ಗಾಯ ಸಾಮಾನ್ಯ ಸ್ವರೂಪದ್ದು ಎಂದರೆ

ಸರಿಯಲ್ಲ. ಆದ ಕಾರಣ ವೈದ್ಯಕೀಯ ಬಿಲ್ಲು ಬಿಟ್ಟರೆ ಬೇರೆ ಪರಿಹಾರಕ್ಕೆ ನಾವು ಅರ್ಹರಲ್ಲ ಎಂದರೆ ಸರಿಯಲ್ಲ.

**1 ನೇ ಎದುರುದಾರರು ಹಾಗೂ ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ.**

**ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು**
**ಮತ್ತು ಎಂ.ಎ.ಸಿ.ಟಿ., ಮೈಸೂರು.**